ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಕರ್ನಾಟಕ ಹಾಗೂ ಆಯ್ಕೆ ಪ್ರಾಧಿಕಾರ, ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003**

## ಪ್ರಕಟಣೆ

**2023-24ನೇ ಸಾಲಿನಲ್ಲಿ 540 ಗಸ್ತು ಅರಣ್ಯ ಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ 'ಅರಣ್ಯ ರಕ್ಷಕ') ಗ್ರೂಪ್ 'ಸಿ' ಹುದ್ದೆಗಳಿಗೆ ನೇರ ನೇಮಕಾತಿ**

*[ಅಧಿಸೂಚನೆ ಸಂಖ್ಯೆ: KFD/HOFF/B9(RCT)/3/2022-PnR-KFD, ದಿನಾಂಕ: 17.11.2023ಗೆ ಸಂಬಂಧಿಸಿದಂತೆ]*

ಈ ಕಛೇರಿಯ ಅಧಿಸೂಚನೆ ದಿನಾಂಕ: 17.11.2023ರಲ್ಲಿ 506 + 34 (ಹಿಂಬಾಕಿ) = ಒಟ್ಟು 540 ಅರಣ್ಯ ರಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ ಆನ್‌ಲೈನ್ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ, ಅರಣ್ಯ ಇಲಾಖೆಯಲ್ಲಿನ ವಿವಿಧ ವೃತ್ತಗಳಲ್ಲಿ ಅಧಿಸೂಚಿತ ಹುದ್ದೆಗಳಿಗೆ ನಿಯಮಾನುಸಾರ 1:20 (ಹುದ್ದೆ:ಅಭ್ಯರ್ಥಿ) ಅಂತಿಮ ಅರ್ಹತಾ ಪಟ್ಟಿಗಳನ್ನು ಆಯಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ ರವರ ಮೂಲಕ ಅರಣ್ಯ ಇಲಾಖೆಯ ಅಧಿಕೃತ ಜಾಲತಾಣದಲ್ಲಿ (www.aranya.gov.in) ಈಗಾಗಲೇ ಪ್ರಕಟಿಸಲಾಗಿರುತ್ತದೆ.

ಈ ನೇಮಕಾತಿ ಪ್ರಕ್ರಿಯೆಯ ಮುಂದಿನ ಹಂತದಲ್ಲಿ ಸದರಿ 1:20 (ಹುದ್ದೆ:ಅಭ್ಯರ್ಥಿ) ಅಂತಿಮ ಅರ್ಹತಾ ಪಟ್ಟಿಗಳಲ್ಲಿನ ಅಭ್ಯರ್ಥಿಗಳಿಗೆ (i) ದೈಹಿಕ ತಾಳ್ವಿಕೆ ಪರೀಕ್ಷೆ [Physical Endurance Test], (ii) ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ [Physical Efficiency Test] ಹಾಗೂ (iii) ಶಾರೀರಿಕ ಮಾನದಂಡಗಳ ಪರೀಕ್ಷೆ [Physical Standard Test]ಗಳನ್ನು ಸಂಬಂಧಿಸಿದ ವೃತ್ತಗಳಲ್ಲಿ **ದಿನಾಂಕ:16.04.2025 (ಬುಧವಾರ)ರಿಂದ ಪ್ರಾರಂಭಿಸಿ ಸದರಿ ಪರೀಕ್ಷೆಗಳು ಪೂರ್ಣಗೊಳ್ಳುವವರೆಗೆ ಆಯೋಜಿಸಲಾಗುವುದು.**

*[**ಸೂಚನೆ:-** ನಿಗದಿತ ದಿನಾಂಕ ಹಾಗೂ ಸಮಯದಲ್ಲಿ ಅಭ್ಯರ್ಥಿಯು ಹಾಜರಾಗದಿದ್ದರೆ ಅಂತಹ ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದು/ಅನರ್ಹಗೊಳಿಸಲಾಗುವುದು ಹಾಗೂ ಬದಲಿ ದಿನಾಂಕವನ್ನು ನೀಡಲಾಗುವುದಿಲ್ಲ.]*

**ಹಾಜರಿರಬೇಕಾದ ಸ್ಥಳ:-** ಸದರಿ ಪರೀಕ್ಷೆಗಳಿಗೆ ಸ್ಥಳಗಳ ವಿವರಗಳನ್ನು ಆಯಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ ರವರ ಮೂಲಕ ಅರಣ್ಯ ಇಲಾಖೆಯ ಅಧಿಕೃತ ಜಾಲತಾಣದಲ್ಲಿ (www.aranya.gov.in) ಪ್ರತ್ಯೇಕವಾಗಿ ಪ್ರಕಟಿಸಲಾಗುವುದು.

**ಹಾಜರುಪಡಿಸಬೇಕಾದ ದಾಖಲಾತಿ ಹಾಗೂ ಇತರೆ ವಿಷಯಗಳು:-**

1. ಅಭ್ಯರ್ಥಿಗಳು ಅನುಸರಿಸಬೇಕಾದ ಕ್ರಮಗಳ ಕುರಿತು ಈ ಕಛೇರಿಯ ಅಧಿಸೂಚನೆ ಸಂಖ್ಯೆ: KFD/HOFF/B9(RCT)/3/2022-PnR-KFD, ದಿನಾಂಕ: 17.11.2023 **ಹಾಗೂ** ವಿಶೇಷವಾಗಿ ಸದರಿ ಅಧಿಸೂಚನೆಯ **ಕಂಡಿಕೆ 7, 8, 9, ಟಿಪ್ಪಣಿ** ಮತ್ತು **ವಿಶೇಷ ಸೂಚನೆ**ಗಳನ್ನು ಕಡ್ಡಾಯವಾಗಿ ಅನುಸರಿಸತಕ್ಕದು.
2. ಸದರಿ ಮೂರು (3) ವಿಧದ ಪರೀಕ್ಷೆಗಳಿಗೆ ಅಭ್ಯರ್ಥಿಗಳು **ಪ್ರತ್ಯೇಕವಾಗಿ** ಈ ಕೆಳಗಿನ ದಾಖಲಾತಿಗಳೊಂದಿಗೆ ಹಾಜರಾಗುವುದು.

a. ಅಧಿಸೂಚನೆಯ ದಿನಾಂಕ: 17.11.2023ರ ಕಂಡಿಕೆ:9ರ ಟಿಪ್ಪಣಿಯ ಕ್ರಮ ಸಂಖ್ಯೆ(2)ರಲ್ಲಿ ನಮೂದಿಸಿದ **ಒಂದು ಗುರುತಿನ ಚೀಟಿಯ ಮೂಲ ಪ್ರತಿ;**

   *[**ಷರಾ:** ಪ್ರತಿಯೊಂದು ಪರೀಕ್ಷೆಗೆ **ಪ್ರತ್ಯೇಕವಾಗಿ** ಒಂದು **ಸ್ವಯಂ ಧೃಢೀಕೃತ ಪ್ರತಿ**ಯನ್ನು ಸಂಬಂಧಿಸಿದ ಪ್ರಾಧಿಕಾರಕ್ಕೆ ನೀಡುವುದು.];*

b. ಆನ್‌ಲೈನ್ (Online) (ಎಲೆಕ್ಟ್ರಾನಿಕ್ ಮಾರ್ಗ) ಅರ್ಜಿಯ **ಸ್ವಯಂ ಧೃಢೀಕೃತ ನಕಲು ಪ್ರತಿ;**

c. ಇತ್ತೀಚಿನ **ಐದು (5)** ಪಾಸ್‌ಪೋರ್ಟ್ ಸೈಜ್ **ಭಾವಚಿತ್ರಗಳು** *(**ಷರಾ:** ಹಿಂಭಾಗದಲ್ಲಿ ತಮ್ಮ ಹೆಸರು ಹಾಗೂ ನೊಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ಸಹಿಯೊಂದಿಗೆ ನಮೂದಿಸಿರುವುದು.)*

Digitally signed by
MEENAKSHI NEGI
Date: 03-03-2025
17:17:27

**ದಿನಾಂಕ:** 03.03.2025

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು), ಕರ್ನಾಟಕ ಹಾಗೂ
**ಆಯ್ಕೆ ಪ್ರಾಧಿಕಾರ**